ಕೊಡುತ್ತೇನೆ. ಆ ಮೇಲೆ, ಇದರ ಬಗ್ಗೆ ಇಲಾಖಾ ಮೂಲಕ ತನಿಖೆ ಮಾಡಿಸಿ ಮಾನ್ಯ ಸದಸ್ಯರು ಹೇಳಿರತಕ್ಕಂಥ ವಿಷಯದಲ್ಲಿ ಸತ್ಯಾಂಶ ಇದ್ದರೆ ತಪ್ಪಿತಸ್ಥರ ಮೇಲೆ ಕ್ರಮ ಸಹಿತ ತೆಗೆದುಕೊಳ್ಳುತ್ತೇನೆ.

ಶ್ರೀ ಟಿ. ಎಸ್. ಮಣಿ.— ಹಣವನ್ನು ಕೊಟ್ಟು ಸೈಟುಗಳನ್ನು ಪರ್ಚೇಸ್ ಮಾಡಿ ಮನೆಗಳನ್ನು ಕಟ್ಟಿಬ್ಬರಿಗೆ ಬಹಳ ಲಾಸ್ ಆಗಿದೆ. ಅವರಿಗೆ ಕಾಂಪನ್‌ಸೇಷನ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಎಂ. ಹಿಂಡಸಗೇರಿ.— ಈ ಜಾಗದಲ್ಲಿ ಮನೆಗಳನ್ನು ಉಳಿಸುವುದಕ್ಕೆ ಡೆವಲಪ್ ಮೆಂಟ್ ಅಥಾರಿಟಿಯವರಿಗೆ ಏನು ಅಧಿಕಾರ ಇದೆ ? ಈ ಜಮೀನು ರೆವಿನ್ಯೂ ಅಥಾರಟಿಗೆ ಸಂಬಂಧ ಪಟ್ಟಿದ್ದಾಗಿರುತ್ತದೆ. ಡೆವಲಪ ಮೆಂಟ ಅಥಾರಿಟಿಯವರು ಬುಲ್ಡೋಜರ್ ಹಚ್ಚಿ ಮನೆಗಳನ್ನು ಕೆಡವುವುದಕ್ಕೆ ಅಧಿಕಾರ ಇಲ್ಲ. ಇದರ ಬಗ್ಗೆ ವಿಚಾರಣೆ ಮಾಡಬೇಕು. ಏಕೆಂದರೆ ಸೆಕ್ಷನ್ ೩೩ರ ಅಡಿಯಲ್ಲಿ ಡೆವಲಪ್‌ಮೆಂಟ್ ಅಥಾರಿಟೀಸ್‌ರವರಿಂದ ನೋಟೀಸ್ ಕೊಟ್ಟಿರಲಿಲ್ಲ. ಆದುದರಿಂದ ಯಾರು ಅಧಿಕಾರಿಗಳು ಇದರ ಹಿಂದೆ ಇದ್ದಾರೆ, ಎಂಬುದನ್ನು ನೋಡಬೇಕು. ಡಿ. ಸಿ ಯವರು ಅಥಾರಿಟಿಯ ಚೇರ್ಮನ್ ಆಗಿರುತ್ತಾರೆ. ಡಿ. ಸಿ. ಯವರು ಆರ್ಡರ್ ಕೊಟ್ಟಿದ್ದಾರೋ, ಅಥವಾ ಕಮಿಷನರ್‌ರವರು ಆರ್ಡರ್ ಕೊಟ್ಟಿದ್ದಾರೋ ಎಂದು ತನಿಖೆ ಮಾಡಬೇಕು. ನಾವು ಸಿ. ಓ. ಡಿ.ತನಿಖೆ ಮಾಡಿಸಬೇಕೆಂದು ಒತ್ತಾಯ ಮಾಡಿದ್ದೆವು. ಆದರೆ ಮಾನ್ಯ ಮಂತ್ರಿಯವರು ಸ್ಪಷ್ಟವಾಗಿ ಆ ಬಗ್ಗೆ ಹೇಳಿಲ್ಲ. ತೊಂದರೆಗೆ ಒಳಗಾದ ಜನರು ಬಹಳ ಬಡವರು, ಹಿಂದುಳಿದವರು, ಬೀಡಿ ಕಾರ್ಮಿಕರು, ಹರಿಜನರು ಮುಂತಾಗಿ ಇದ್ದಾರೆ ಅಲ್ಪ ಸಂಖ್ಯಾತರು ಕೂಡ ಇದ್ದಾರೆ. ಅವರಿಗೆ ಈ ಕಾರಣದಿಂದ ಏನು ನಷ್ಟ ಸಂಭವಿಸಿದೆ ಅದನ್ನು ಸರಕಾರ ತುಂಬಿಸಿ ಕೊಡಬೇಕು ಮತ್ತು ಆ ಸೈಟ್‌ಗಳನ್ನು ಡೆವಲಪ್‌ಮೆಂಟ್ ಮಾಡಿ ಆ ಜನರಿಗೆ ಮಾತ್ರ ಒದಗಿಸಿಕೊಡಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಅಧ್ಯಕ್ಷರೇ ಅಲ್ಲಿ ಅನಧಿಕೃತವಾಗಿ ಕಟ್ಟಿರತಕ್ಕಂಥ ಕಟ್ಟಡಗಳನ್ನು ಡೆಮಾಲಿಷ್ ಮಾಡಿದ್ದೇವೆ. ಇಲ್ಲಿ ಪರಿಹಾರ ಕೊಡುವ ಪ್ರಶ್ನೆಯು ಉದ್ಭವಿಸುವುದಿಲ್ಲ. ಮಾನ್ಯ ಸದಸ್ಯರು ಏನು ಹೇಳಿದ್ದಾರೆ, ಬುಲ್ಡೋಜರ್ ಮೂಲಕ ಡೆಮಾಲಿಶ್ ಮಾಡುವ ಸಂದರ್ಭದಲ್ಲಿ ಸೂಕ್ತ ಮಾರ್ಗದಲ್ಲಿ ಆದೇಶ ನೋಟೀಸ್‌ಗಳ ಮೂಲಕ ಮಾಡಿದ್ದಾರೆಯೇ ಎಂದು ಕೇಳಿದ್ದಾರೆ. ಈಗ ಆ ಬಗ್ಗೆ ವಿಚಾರಣೆಯನ್ನು ನಾವು ಸಿ. ಓ. ಡಿ. ಮೂಲಕ ಮಾಡುವುದಕ್ಕೆ ಆಗುವುದಿಲ್ಲ, ಇಲಾಖೆಯ ಉನ್ನತ ಮಟ್ಟದ ಅಧಿಕಾರಿಗಳ ಮೂಲಕ ಇದರ ಬಗ್ಗೆ ಸೂಕ್ತ ವಿಚಾರಣೆಯನ್ನು ಮಾಡಿಸುತ್ತೇನೆ.

ಅಧ್ಯಕ್ಷರು.— ಗಮನ ಸೆಳೆಯುವ ಸೂಚನೆ, ಶ್ರೀ ಕೆ. ಬಿ. ಶಾಣಪ್ಪನವರು.

iii) ಗುಲ್ಬರ್ಗ ಖಾಜಾಬಂದೇನವಾಜ್ ಇಂಜಿನಿಯರಿಂಗ್ ಕಾಲೇಜಿನ ಶಿಕ್ಷಕೇತರರಿಗೆ ವೇತನ ನೀಡದೇ ಇದ್ದುದರಿಂದ ಉಪವಾಸ ಸತ್ಯಾಗ್ರಹ.

ಶ್ರೀ ಕೆ. ಬಿ. ಶಾಣಪ್ಪ.— ಮಾನ್ಯ ಅಧ್ಯಕ್ಷರೇ, ಗುಲ್ಬರ್ಗದ ಖಾಜಾ ಬಂದೇನವಾಜ್ ಇಂಜಿನಿಯರಿಂಗ್ ಕಾಲೇಜಿನ ಶಿಕ್ಷಕೇತರ ನೌಕರರ ಸಂಘದವರಿಗೆ ಸಂಸ್ಥೆಯ ಆಡಳಿತವರ್ಗವು ಕೆ.ಸಿ.ಎಸ್. ಆರ್. ನಿಯಮಗಳ ರೀತ್ಯಾ ಕೆಲಸಕ್ಕೆ ನೇಮಿಸಿಕೊಂಡಿದ್ದಾಗ್ಯೂ ಅವರಿಗೆ ವೇತನ ನೀಡದಿರುವ ಬಗ್ಗೆ ಪ್ರತಿಭಟಿಸಿ ಉಪವಾಸ ಸತ್ಯಾಗ್ರಹ ಕುಳಿತಿರುವ ಬಗ್ಗೆ ಮಾನ್ಯ ಶಿಕ್ಷಣ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ಚಂದ್ರಶೇಖರಿರ್ (ಶಿಕ್ಷಣ ಸಚಿವರು).— ಗುಲ್ಬರ್ಗದ ಖಾಜಾ ಬಂದೇನವಾಜ್ ಇಂಜಿನಿಯರಿಂಗ್ ಕಾಲೇಜು, ಅಲ್ಪ ಸಂಖ್ಯಾತರ ಆಡಳಿತ ವರ್ಗಕ್ಕೆ ಸೇರಿದ ಖಾಸಗಿ ಕಾಲೇಜು. ಅಲ್ಲಿಯ ಸಿಬ್ಬಂದಿಯ ಸೇವಾ ವಿಷಯಗಳು ಆಡಳಿತ ವರ್ಗಕ್ಕೆ ಸೇರಿದ್ದಾಗಿರುತ್ತದೆ. ಇದರಲ್ಲಿ ಸರ್ಕಾರದ ಪಾತ್ರವೇನೂ ಇರುವುದಿಲ್ಲ. ಈ ಕಾಲೇಜಿನ ಆಡಳಿತ ವರ್ಗ ಹಾಗೂ ನೌಕರರ ಸಮಸ್ಯೆಯಲ್ಲಿ ಸರ್ಕಾರ ಮಧ್ಯೆ ಪ್ರವೇಶಿಸುವುದು ಸಾಧ್ಯವಿಲ್ಲ.

ಆದಾಗ್ಯೂ ಈ ವಿಷಯದಲ್ಲಿ ಸರ್ಕಾರ ಆಡಳಿತ ಮಂಡಳಿಯ ಮತಿಯಿಂದ ವಿವರಗಳನ್ನು ಪಡೆದಿದೆ; ನೋಂದಣಿ ಹೊಂದದ, ಬೋಧಕೇತರ ಸಿಬ್ಬಂದಿ ಸಂಘ ಹಾಗೂ ಆಡಳಿತ ವರ್ಗದ ನಡುವೆ ಭಿನ್ನಾಭಿಪ್ರಾಯ ಉಂಟಾಗಿದೆ. ಬೋಧಕೇತರ ಸಿಬ್ಬಂದಿ ವರ್ಗದವರ ಬೇಡಿಕೆಗಳ ಬಗ್ಗೆ, ಆಡಳಿತ ವರ್ಗ ಮತ್ತು ಸಂಘದ ನಡುವೆ ಮಾತುಕತೆ ನಡೆದಿದ್ದು, ಆಡಳಿತ ವರ್ಗವು ಕೆಲವು ಪರಿಹಾರಗಳನ್ನು ಸೂಚಿಸಿದೆ. ಆದರೆ, ಈ ವಿಷಯದಲ್ಲಿ ಸರ್ಕಾರವು ಮಧ್ಯೆ ಪ್ರವೇಶಿಸಲು ಸಾಧ್ಯವಿಲ್ಲದೇ ಇರುವುದರಿಂದ ಈ ಭಿನ್ನಾಭಿಪ್ರಾಯಗಳನ್ನು, ಆಡಳಿತ ವರ್ಗ ಮತ್ತು ಸಿಬ್ಬಂದಿ ವರ್ಗಗಳ ಮಾತುಕತೆಯಿಂದ ಪರಿಹರಿಸಿಕೊಳ್ಳಬೇಕಾಗುತ್ತದೆ.

ಶ್ರೀ ಕೆ.ಬಿ. ಶಾಣಪ್ಪ.—ಮಾನ್ಯ ಅಧ್ಯಕ್ಷರೇ, ಈ ಖಾಜಾ ಬಂದೇ ನವಾಜ್ ಇಂಜಿನೀಯರಿಂಗ್ ಇನ್‌ಸ್ಟಿಟ್ಯೂಟ್ ನಮ್ಮ ಹೈದ್ರಾಬಾದ್ ಎಜುಕೇಶನ್ ಸೊಸೈಟಿಯನ್ನು ಬಿಟ್ಟರೆ ಒಂದು ದೊಡ್ಡ ಶಿಕ್ಷಣ ಸಂಸ್ಥೆಯಾಗಿದೆ. ಇದೊಂದು ಅಲ್ಪ ಸಂಖ್ಯಾತರು ನಡೆಸುವ ಶಿಕ್ಷಣ ಸಂಸ್ಥೆಯಾಗಿದೆ. ಆದರೆ ಇಂಥ ಖಾಸಗೀ ಇಂಜಿನೀಯರಿಂಗ್ ಹಾಗೂ ಮೆಡಿಕಲ್ ಕಾಲೇಜುಗಳನ್ನು ಸರಕಾರ ಪ್ರಾರಂಭ ಮಾಡಲು ಪರವಾನಗೆ ಕೊಟ್ಟಾಗ ಅದಕ್ಕೆ ಕೆಲವು ನಿರ್ಬಂದನೆಗಳನ್ನು ಕೂಡ ನಾವು ಮಾಡುತ್ತೇವೆ. ಆಲ್ಲಿರುವ ಟೀಚಿಂಗ್ ಸ್ಟಾಫ್‌ನವರಿಗೆ ಸರಕಾರಿ ಇಜಿನೀಯರ್ಸ್‌ಗೆ ಅಥವಾ ಸರಕಾರಿ ಟೀಚರ್ಸ್‌ಗೆ ಕೊಡ ಪ ಸಂಬಳವನ್ನು ಕೊಡಬೇಕಾಗುತ್ತದೆ. ಅದೇ ರೀತಿಯಲ್ಲಿ ನಾನ್ ಟೀಚಿಂಗ್ ಸ್ಟಾಫ್‌ಗೆ ಕೂಡ ಕೆಲವು ನಿರ್ಬಂದನೆಗಳನ್ನು ಮಾಡಿದ್ದೇವೆ. ಆ ಪ್ರಕಾರವಾಗಿ ಈ ಸಂಸ್ಥೆಯಲ್ಲಿ ಸುಮಾರು ೮೫ ಜನರು ನಾನ್ ಟೀಚಿಂಗ್ ಸ್ಟಾಫ್‌ನವರು ಇದ್ದಾರೆ. ಇದರಲ್ಲಿ ಲೈಬ್ರೇರಿಯನ್, ಸ್ವೀಪರ್ಸ್, ಪೀವನ್ಸ್, ಕುಕ್ಸ್ ಮುಂತಾಗಿ ಇದ್ದಾರೆ. ಇವರಿಗೆಲ್ಲಾ ಸೂಕ್ತ ರೀತಿಯಲ್ಲಿ ನಿಯಮಗಳನುಸಾರವಾಗಿ ಸಂಬಳ ಸಿಗಬೇಕು. ಇದೇ ಸಂಸ್ಥೆಯವರು ಈ ಜನರಿಗೆ ೧೯೬೫ನೇ ಇಸವಿಯವರಿಗೆ ಸರಿಯಾದ ರೀತಿಯಲ್ಲಿ ಸಂಬಳವನ್ನು ಕೊಟ್ಟಿದ್ದಾರೆ. ಆದರೆ ೧೯೬೫ರ ನಂತರ they have stopped this salary. ಅದನ್ನು ನಿಲ್ಲಿಸಿ, ಕನ್ಸಾಲಿಡೇಟೆಡ್ ಸ್ಯಾಲರಿ ಎಂದು ಮಾಡಿಬಿಟ್ಟಿದ್ದಾರೆ. ಇದಕ್ಕಾಗಿ ಆ ನೌಕರ ವರ್ಗದವರು ಒಂದು ಸಂಘಟನೆಯನ್ನು ಮಾಡಿಕೊಂಡು ಮ್ಯಾನೇಜ್‌ಮೆಂಟ್‌ನವರ ಮುಂದೆ ತಮ್ಮ ಡಿಮ್ಯಾಂಡ್‌ನ್ನು ಇಟ್ಟಿದ್ದರು. ಅದೇ ರೀತಿಯಲ್ಲಿ ಸರಕಾರದವರ ಮುಂದೆ ಹಾಗೂ ತಮ್ಮ ಗಮನಕ್ಕೂ ಅವರ ಕಷ್ಟವನ್ನು ಹೇಳಿಕೊಂಡಿದ್ದಾರೆ. ಇವುಗಳಿಲ್ಲವೂ ಅವರಿಗೆ ಫಲಕಾರಿಯಾಗಿ ಕಂಡು ಬಾರದ ಕಾರಣ, ಇದೇ ತಿಂಗಳ ೩ನೇ ತಾರೀಖಿನಿಂದ ಹಂಗರ್‌ಸ್ಟ್ರೈಕ್ ನಡೆಸಿದ್ದಾರೆ. ೨ನೇ ತಾರೀಖಿನಿಂದ ಅನಿರ್ದಿಷ್ಟ ಕಾಲದ ಸತ್ಯಾಗ್ರಹವನ್ನು ಕೂಡ ಮಾಡಲಿಕ್ಕೆ ಸಿದ್ದರಾಗಿದ್ದಾರೆ.

ಅಧ್ಯಕ್ಷರು.—ನೀವು ಸರಕಾರದಿಂದ ಏನು ಕ್ಲಾರಿಫಿಕೇಶನ್ ಕೇಳ ಬೇಕಾಗಿದೆ ಅದನ್ನು ಕೇಳಿ ಮಾನ್ಯ ಸಚಿವರು ಈಗಾಗಲೇ ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಕೆ.ಬಿ ಶಾಣಪ್ಪ.—ನೀವು ಸರಕಾರದ ಪತಿಯಿಂದ ಸರಕಾರಿ ನೌಕರರಿಗೆ ಯಾವ ಪ್ರಕಾರವಾಗಿ ಸಂಬಳವನ್ನು ಕೊಡಂತೀರಿ ಅದೇ ಪ್ರಕಾರ ಖಾಸಗೀ ಇಂಜಿನಿಯರಿಂಗ್ ಅಥವಾ ಮೆಡಿಕಲ್ ಕಾಲೇಜು ಗಳಲ್ಲಿರುವ ಸಿಬ್ಬಂದಿಗಳಿಗೂ ಕೊಡುವ ಹಾಗೆ ಇರಬೇಕು. ಆ ದಿಸೆಯಲ್ಲಿ ಸರಕಾರದವರು ಖಾಸಗೀ ಸಂಸ್ಥೆಗಳವರಿಗೆ ಒತ್ತಾಯವನ್ನು ತರಬೇಕು. ಹಾಗೆ ಸಂಸ್ಥೆಯವರಿಗೆ ಒಂದು ಒತ್ತಾಯವನ್ನು ತಂದು ಹಂಗರ್‌ಸ್ಟ್ರೈಕ್ ಕುಳಿತವರಿಗೆ ನೀವು ನಿಮ್ಮ ಹಂಗರ್‌ಸ್ಟ್ರೈಕನ್ನು ಮುಂದುವರಿಸಬೇಡಿ ಎಂದು ಹೇಳಿ ವಿವಾದವನ್ನು ಸೆಟಲ್ ಮಾಡುತ್ತೇವೆ ಎಂದು ಹೇಳಿದರೆ ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಈ ವಿಷಯದಲ್ಲಿ ಮ್ಯಾನೇಜ್‌ಮೆಂಟ್‌ನವರು ತಯಾರಾಗಿಲ್ಲ. ಪ್ರತಿವರ್ಷವೂ ಕೋಟ್ಯಾಂತರ ರೂಪಾಯಿ ಗಳ ವ್ಯವಹಾರವನ್ನು ಡೊನೇಶನ್ ಇತ್ಯಾದಿಗಳ ಮೂಲಕ ಮಾಡುವ ಸಂಸ್ಥೆಯವರು ನಾನ್‌ಟೀಚಿಂಗ್ ಸ್ಟಾಫ್‌ನವರಿಗೆ ಸರಿಯಾದ ಸ್ಯಾಲರಿ ಕೊಡುವುದಿಲ್ಲ ಎಂದರೆ ಅದಕ್ಕೆ ಏನು ಅರ್ಥ ? ಈ ಬಗ್ಗೆ ಇತ್ಯರ್ಥ ಮಾಡಲು ಸರಕಾರದವರು ಮುಂದಾಗಬೇಕು. ಅವರಿಗೆ ಒಂದು ಭರವಸೆ ಕೊಟ್ಟು ಸ್ಟೈಕ್ ಮಾಡುವುದನ್ನು ನಿಲ್ಲಿಸಲು ಪ್ರಯತ್ನ ಮಾಡಬೇಕು. ಟೆಕ್ನಿಕಲ್ ಎಜುಕೇಷನ್ ಡೈರೆಕ್ಟರ್‌ರವರನ್ನು ಆಲ್ಲಿಗೆ ಕಳುಹಿಸಿ ಪರಿಶೀಲನೆ ಮಾಡಿಸಿ, ಸಂಸ್ಥೆಯವರನ್ನು ಕರೆಯಿಸಿ ಚರ್ಚಿಸಿ ಒಂದು ಇತ್ಯರ್ಥಕ್ಕೆ ಬರಬೇಕು. Whether they are paid according to rules or not.? Please enquire and see that justice is given to people. Otherwise they will continue indefinite hunger strike.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಇದೊಂದು ಖಾಸಗೀ ವಿದ್ಯಾ ಸಂಸ್ಥೆ ಮಾತ್ರ ವಲ್ಲದೆ ಅಲ್ಪಸಂಖ್ಯಾತ ಕೋಮಿಗೆ ಸೇರಿದ ಒಂದು ವಿದ್ಯಾಸಂಸ್ಥೆಯಾಗಿದೆ, ಈ ಒಂದು ಕಾರಣದಿಂದ ನಮಗೆ ಆ ಸಂಸ್ಥೆಯ ಮೇಲೆ ಸರಕಾರದ ಪತಿಯಿಂದ ಯಾವುದೇ ಒಂದು ರೀತಿಯ ನಿಯಂತ್ರಣ, ನಿರ್ದೇಶನ ನೀಡುವುದಕ್ಕೆ ಸಾಧ್ಯವಾಗುವುದಿಲ್ಲ. ಅವರು ಹೇಳುವ ಪ್ರಕಾರ ಅಲ್ಲಿರುವ ನೌಕರರು ಯಾವುದೇ ಒಂದು ರಿಜಿಸ್ಟರ್ಡ್ ನೌಕರರ ಸಂಘದವರು ಅಲ್ಲ. ಅಲ್ಲಿ ಕೆಲವರು ಮಧ್ಯೆ ಪ್ರವೇಶಿಸಿ ಆಡಳಿತದಲ್ಲಿ ಈ ರೀತಿಯ ಸಮಸ್ಯೆ ತರುತ್ತಾ ಇದ್ದಾರೆ ಮತ್ತು ನಾವು ಯಾವುದೇ ರೀತಿಯ ಸರಕಾರದ ಸ್ಕೇಲ್‌ನ್ನು ಕೊಡುತ್ತೇವೆ ಎಂದೂ ಅವರನ್ನು ನೇಮಕ ಮಾಡಿಕೊಳ್ಳುವ ಸಂದರ್ಭದಲ್ಲಿ ಮಾತು ಕೊಟ್ಟಿರಲಿಲ್ಲ ನಾವು ಕೊಡುತ್ತಿರತಕ್ಕಂಥ ವೇತನಕ್ಕೆ ಸಂಬಂಧಪಟ್ಟ ಹಾಗೆ ಅವರು ಅನುಸರಿಸಿಕೊಂಡು ಹೋಗಬಹುದು ಎಂದು ಸಂಸ್ಥೆಯವರು ಹೇಳಿದ್ದಾರೆ. ನಾನು ಸಂಸ್ಥೆಯವರನ್ನು ಸಂಪರ್ಕ ಮಾಡಿದ ಮೇಲೆ, ಸಂಸ್ಥೆಯವರು ನೌಕರವರ್ಗದವರನ್ನು ಕರೆದು ಮಾತನಾಡಿದ್ದಾರೆ. Pay of helpers will be raised by 7 increments or Rs. 200 will be increased which

ever is lower in the existing scale. The matter was discussed with them on 14-3-1989. ಆದರೂ ಕೂಡ ಅವರು ಒಪ್ಪಿಗೆ ಕೊಡುತ್ತಾ ಇಲ್ಲ. ನಾವು ಏನು ಮಾಡೋಣ ಎಂದು ಹೇಳುತ್ತಾ ಇದ್ದಾರೆ. ಅಂಥ ಸಂದರ್ಭದಲ್ಲಿ ಇದೊಂದು ಅನ್‌ಏಡೆಡ್ ಸಂಸ್ಥೆ ಹಾಗೂ ಅಲ್ಪಸಂಖ್ಯಾತರು ನಡೆಸುತ್ತಿರುವ ಸಂಸ್ಥೆ ಆಗಿರುವುದರಿಂದ ಅವರಿಗೆ ರಾಜ್ಯಾಂಗದ ಕೆಲವು ಹಕ್ಕುಗಳು ಇರುವುದರಿಂದ ಅಲ್ಲಿ ಸರಕಾರ ನೇರ ಪ್ರವೇಶ ಮಾಡುವುದಕ್ಕೆ ಆಗುವುದಿಲ್ಲ. ಆದರೂ ಕೂಡ ಡಿ.ಟಿ.ಇ. ಯವರನ್ನು ಸಂಪರ್ಕ ಮಾಡಿ ಆ ಬಗ್ಗೆ ಒಂದು ಪರಿಹಾರವನ್ನು ಕಂಡುಹಿಡಿಯಲು ಹೇಳುತ್ತೇನೆ.

ಶ್ರೀ ಕೆ. ಬಿ. ಶಾಣಪ್ಪ.—ಮಾನ್ಯ ಅಧ್ಯಕ್ಷರೇ, ಯಾವುದೇ ಒಂದು ಸಂಸ್ಥೆಯನ್ನು ನಡೆಸ ಬೇಕಾದರೆ ಸರಕಾರದ ಪರವಿಂದ ಕೆಲವು ನಿರ್ಬಂಧಗಳು ಇವೆ. ಆ ಸಂಸ್ಥೆಗಳು ಖಾಸಗೀಯವಾಗಿರಲಿ, ಅಲ್ಪಸಂಖ್ಯಾತರದ್ದೇ ಆಗಿರಲಿ, ವೈಜಾರಿಟಿ ಕಮ್ಯುನಿಟಿಯವರದ್ದೇ ಆಗಿರಲಿ, you withdraw the licence given to them. When they violate certain norms fixed we have got power to withdraw the licence given to them. ಈ ದೇಶದಲ್ಲಿರುವ ಯಾವ ಪ್ರಜೆಗೆ ಅವರು ಅನ್ಯಾಯ ಮಾಡುವ ಅಧಿಕಾರ ಇಲ್ಲ. ಅಂತೆಯೇ ಈ ಸಂಸ್ಥೆ ಕೂಡ ಬಹಳ ದೊಡ್ಡ ಸಂಸ್ಥೆ, ಬಡ ಸಂಸ್ಥೆ ಅಲ್ಲ. ಕೋಟ್ಯಾಂತರ ರೂಪಾಯಿಗಳ ಬ್ಯಾಂಕ್‌ಬ್ಯಾಲೆನ್ಸ್ ಹೊಂದಿರ ತಕ್ಕಂಥ ಸಂಸ್ಥೆ. ಆದರೆ ಅದರ ಮ್ಯಾನೇಜ್‌ಮೆಂಟಿನ ಒಂದು ವರ್ತನೆಯಿಂದಾಗಿ ಅಲ್ಲಿಯ ಪರಿಸ್ಥಿತಿಯು ವಿಕೋಪಕ್ಕೆ ಹೋಗುವಂತಾಗಿದೆ. ಅವರು ಅಲ್ಲಿಯ ನೌಕರರಿಗೆ ಸರಕಾರಿ ವೇತನದ ಪ್ರಕಾರ ಕೊಟ್ಟರೆ ನಮ್ಮ ಯಾವುದೇ ಆಭ್ಯಂತರವಿಲ್ಲ. ಆದುದರಿಂದ ಡಿ.ಟಿ.ಇ. ಯವರನ್ನು ಕಳುಹಿಸಿ ಈ ಒಂದು ಇಶ್ಯೂವನ್ನು ಸೆಟಲ್‌ಮೆಂಟ್ ಮಾಡಬೇಕು. ಅಲ್ಲಿ ನಡೆಯುತ್ತಿರುವ ಹಂಗರ್‌ಸ್ಟ್ರೈಕನ್ನು ನಿಲ್ಲಿಸುವುದಕ್ಕೆ ತಾವುಗಳು ಸಹಾಯ ಮಾಡಬೇಕೆಂದು ಹೇಳಿ. ಹೋದ ಸಲ ರಿಕ್ವಿಸಾದವರು ಸ್ಟ್ರೈಕ್ ಮಾಡಿದಾಗ ತಾವುಗಳು ಸಹಕರಿಸಿದ್ದೀರಿ. ಅದೇ ಪ್ರಕಾರ ಈ ಒಂದು ಸಮಸ್ಯೆಯನ್ನು ಕೂಡ ಬಗೆಹರಿಸುವಲ್ಲಿ ಸಹಕರಿಸುತ್ತೀರಿ ಎಂದು ನಂಬಿದ್ದೇನೆ.

ಶ್ರೀ ಎಂ. ಚಂದ್ರಶೇಖರ್.—ನಾನು ಗುಲ್ಬರ್ಗಕ್ಕೆ ಹೋದಾಗ ಸಂಬಂಧಪಟ್ಟವರು ಸಂಪರ್ಕ ಮಾಡಿದ್ದರು. ನಾನು ಆ ಸಂಸ್ಥೆಯವರೊಂದಿಗೆ ಮಾತನಾಡಿದಾಗ ಸಂಸ್ಥೆಯವರು ನೌಕರ ವರ್ಗ ದವರೊಂದಿಗೆ ಮಾತನಾಡಿದ್ದಾಗಿಯೂ, ಆದರೆ ಒಪ್ಪಿಗೆ ಆಗಲಿಲ್ಲ ಎಂದು ಹೇಳಿದ್ದಾರೆ.

ನಾನು ಈಗಾಗಲೇ ಹೇಳಿದ ಹಾಗೆ ಡಿ.ಟಿ.ಇ. ಯವರು ಈಗ ಮದ್ರಾಸ್‌ಗೆ ಹೋಗಿದ್ದಾರೆ, ಅವರು ಬಂದಮೇಲೆ, ಅವರನ್ನು ಸಂಪರ್ಕ ಮಾಡಿ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಿ ಎಂದು ಹೇಳುತ್ತೇನೆ.

ಶ್ರೀ ಕೆ.ಬಿ. ಶಾಣಪ್ಪ.—ಡಿ.ಟಿ. ಯವರನ್ನು ಯಾವಾಗ ಕಳುಹಿಸುತ್ತೀರಿ ? ಈಗಾಗಲೇ ವಿಳಂಬ ವಾಗಿದ್ದು, ಇನ್ನೂ ಅವರು ಸತ್ಯಾಗ್ರಹವನ್ನು ಕಂಟಿನ್ಯೂ ಮಾಡಲಿ ಅನ್ನುತ್ತೀರಾ ? ಏನಾದರೂ ಒಂದು ಪರಿಹಾರ ಬೇಡವೇ ?

ಅಧ್ಯಕ್ಷರು.—ಶಾಣಪ್ಪನವರೇ, ನಿಮಗೆ ಎರಡು ಸಾರಿ ಅವಕಾಶವನ್ನು ಕೊಟ್ಟಿದ್ದೇನೆ. ಇನ್ನೂ ಮಾತನಾಡಬೇಕು ಅಂದರೆ ಹೇಗೆ ? ರಾಜ್ಯದಲ್ಲಿ ದಿನನಿತ್ಯವೂ ಸಾವಿರಾರು ಜನ ಸ್ಟ್ರೈಕ್ ಮಾಡುತ್ತಾ ಇರುತ್ತಾರೆ. ಮಂತ್ರಿಯವರು ಈಗಾಗಲೇ ಸಮರ್ಪಕವಾಗಿ ಉತ್ತರವನ್ನು ಕೊಟ್ಟಿದ್ದಾರೆ. ನಿಮಗೆ ಅದು ಸಮಾಧಾನವಾಗದಿದ್ದರೆ ನಾನು ಏನು ಮಾಡಲಿ ? ತಾವು ದಯವಿಟ್ಟು ಕುಳಿತುಕೊಳ್ಳಬೇಕು.

ಶ್ರೀ ಕೆ.ಬಿ. ಶಾಣಪ್ಪ.—ಹಾಗಾದರೆ ಖಾಸಗೀಯವರು ಏನು ಮಾಡಿದರೂ ನಡೆಯುತ್ತದೆ ಎಂದ ಹಾಗೆ ಆಗುತ್ತದೆ ?

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಹಿರಿಯ ನಾಯಕರುಗಳಾದ ಧರ್ಮಸಿಂಗ್‌ರವರು, ಖಾರ್ಗೆ ಯವರು ಮುಂತಾದವರು ಇದ್ದಾರೆ, ಅವರುಗಳು ತಮ್ಮ ನೇತೃತ್ವವನ್ನು ವಹಿಸಿ ಮ್ಯಾನೇಜ್‌ಮೆಂಟ್ ನವರೊಂದಿಗೆ ಸಂಪರ್ಕ ಮಾಡಿದರೆ ನಿಮ್ಮ ಮಾತಿಗೆ ಮ್ಯಾನೇಜ್‌ಮೆಂಟ್‌ನವರು ಒಪ್ಪುತ್ತಾರೆ. ಈ ರೀತಿಯಾದ ಒಂದು ಕ್ರಮವನ್ನು ಮಾಡುವುದು ಒಳ್ಳೆಯದು.

ಶ್ರೀ ಧರ್ಮಸಿಂಗ್.—ಅಧ್ಯಕ್ಷರೇ, ಗುಲ್ಬರ್ಗದಲ್ಲಿ.....

ಅಧ್ಯಕ್ಷರು.—ಗುಲ್ಬರ್ಗದಲ್ಲಿ ಏನಾದರೂ ಆದರೆ ಅದು ನಿಮಗೆ ಸಂಬಂಧವೇ ? ನೀವುಗಳು ಮಂತ್ರಿಗಳಾಗಿ ಇದ್ದವರು, ನಿಮಗೆ ಡಿಸಿಪ್ಲೀನ್ ನಾನು ಹೇಳಿಕೊಡಬೇಕೆ ?

ಶ್ರೀ ಧರ್ಮಸಿಂಗ್.—ಸಮಸ್ಯೆಗೆ ಒಂದು ಪರಿಹಾರವನ್ನು ಕಂಡುಕೊಳ್ಳಬೇಕು ಎಂದು ನಾನು ಕೂಡ ಹೇಳುತ್ತಿದ್ದೇನೆ.

ಶ್ರೀ ಎಂ. ಚಂದ್ರಶೇಖರ್.— ಜಿಲ್ಲೆಯ ಹಿರಿಯ ಸದಸ್ಯರಾದ ಶ್ರೀ ಧರ್ಮಸಿಂಗ್‌ರವರು ಮತ್ತು ಖರ್ಗೆಯವರು ಇದ್ದಾರೆ. ನೀವುಗಳು ಸೇರಿ ಅಲ್ಲಿನ ಮ್ಯಾನೇಜ್‌ಮೆಂಟ್‌ನವರನ್ನು ಭೇಟಿ ಮಾಡಿ ಚರ್ಚೆ ಮಾಡಿದರೆ ವಿವಾದ ಬಗೆಹರಿಯುತ್ತದೆ, ನಿಮ್ಮ ಮಾತಿಗೆ ಒಪ್ಪಿಗೆ ಕೊಡಬಹುದು. ಆ ರೀತಿಯಲ್ಲಿ ಅದು ನಡೆಯಬೇಕೇ ಹೊರತು ಸರಕಾರ ಆದೇಶ ನೀಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಬಿ. ಶಾಣಪ್ಪ.— ಅಲ್ಲಿ ಹಂಗರ್ ಸ್ಟ್ರೈಕ್ ನಡೆಯುತ್ತಿದೆ. You have to help them.

ಶ್ರೀ ಧರ್ಮಸಿಂಗ್.— ನೀವು ಮಂತ್ರಿಗಳಾಗಿದ್ದೀರಿ, ನೀವೇ ಹೋಗಿ ಸಮಸ್ಯೆಯನ್ನು ಬಗೆಹರಿಸಿ.

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಮುದ್ನಾಳ್‌ರವರು ಹೋಗಿ ಒಂದು ಮಾತು ಹೇಳಿದರೆ ಆಗುತ್ತದೆ.

(ಗೊಂದಲ)

ಶ್ರೀ ಧರ್ಮಸಿಂಗ್.— ದೂರವಾಣಿ ಸಂಖಾಂತರ ಇಲ್ಲವೇ ಅಲ್ಲಿನ ಮುಖ್ಯಸ್ಥರನ್ನು ಕರೆಯಿಸಿ ಮಾತನಾಡಿದರೆ ಹಂಗರ್ ಸ್ಟ್ರೈಕ್ ನಿಲ್ಲುತ್ತದೆ.

ಶ್ರೀ ಕೆ. ಬಿ. ಶಾಣಪ್ಪ.— ಮಂತ್ರಿಗಳು ಸರಿಯಾದ ಉತ್ತರ ಕೊಡಬೇಕು.

ಅಧ್ಯಕ್ಷರು.— ನೀವು ಕುಳಿತುಕೊಳ್ಳಿ, ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ನೀವು ಈ ರೀತಿ ಮಾತನಾಡಿದರೆ ರೆಕಾರ್ಡ್ ಆಗುವುದಿಲ್ಲ. ಸಮಯದ ಮಹತ್ವ ತಮಗೆ ಗೊತ್ತಿಲ್ಲವೇ? Not to be recorded.

(ಈ ಹಂತದಲ್ಲಿ ಮಾನ್ಯ ಶಾಣಪ್ಪನವರು ಪೆಲ್‌ಗೆ ಬಂದರು)

ಅಧ್ಯಕ್ಷರು.— ನೀವು ನಿಮ್ಮ ಜಾಗಕ್ಕೆ ಹೋಗಿ ಕುಳಿತುಕೊಳ್ಳಿ ಸಾಕಷ್ಟು ಅವಕಾಶ ಕೊಟ್ಟಿದ್ದೇನೆ. ಪ್ರತಿ ದಿವಸ ಕಾಲಿಂಗ್ ಅಟೆನ್‌ಷನ್ ಇರುತ್ತವೆ.

(ಗೊಂದಲ)

Mr. Speaker.— Nothing will be recorded.

(Interruption)

ನೀವು ಅವರ ಜೊತೆಯಲ್ಲಿ ಹೋಗಿ ಮಾತನಾಡಿ. Whatever you say it is expunged.

(ಗೊಂದಲ)

ಅಧ್ಯಕ್ಷರು.— ಈ ರೀತಿ ಮಾತನಾಡಿದರೆ ತಮ್ಮನ್ನು ಹೊರಕ್ಕೆ ಹಾಕಬೇಕಾಗುತ್ತದೆ. ಅವರ ಪಕ್ಕದಲ್ಲಿ ಹೋಗಿ ಕುಳಿತುಕೊಂಡು ಮಾತನಾಡಿ. ಬೇರೆ ವಿಷಯ ಇದೆ.

(IV) ಮೈಸೂರು ನಗರದ ನಾಗರೀಕರಿಗೆ ಕಳೆದ ಆರು ತಿಂಗಳಿನಿಂದ ನೀರು ಸರಬರಾಜಿನಲ್ಲಿ ಆಡಚಣೆ ಉಂಟಾಗಿರುವುದು

ಶ್ರೀ ವೇದಾಂತ ಹೆಬ್ಬಿಗೆ.— ಮಾನ್ಯ ಅಧ್ಯಕ್ಷರೆ, ಮೈಸೂರು ನಗರದ ನಾಗರೀಕರಿಗೆ ಕಳೆದ ೬ ತಿಂಗಳಿನಿಂದ ನೀರು ಸರಬರಾಜಿನಲ್ಲಿ ಉಂಟಾಗಿರುವ ಸಮಸ್ಯೆ ಬಗ್ಗೆ ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ನಾನೂ ಕೂಡ ಇದೇ ವಿಚಾರದ ಬಗ್ಗೆ ಮಾನ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಪಿ. ಜಿ. ಆರ್, ಸಿಂಧ್ಯ.— ಮಾನ್ಯ ಅಧ್ಯಕ್ಷರೆ, ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಮೈಸೂರು ನಗರದಲ್ಲಿ ಹಾಲಿ ಸುಮಾರು ೬ ಲಕ್ಷ ಜನಸಂಖ್ಯೆಯು ಇರುತ್ತದೆ. ಈಗ ಕಾವೇರಿ ನದಿ ಮತ್ತು ಸುಮಾರು ೯೦ ಕೊಳವೆ ಬಾವಿಗಳಿಂದ ನಗರಕ್ಕೆ ನೀರು ಸರಬರಾಜು ಮಾಡಲಾಗುತ್ತಿದೆ. ಈ ಎರಡು ಮೂಲಗಳಿಂದ ದಿನ ೧ಕ್ಕೆ ಸುಮಾರು ೧೯ ಮಿಲಿಯನ್ ಗ್ಯಾಲನ್ ಪ್ರಮಾಣದ ನೀರನ್ನು